








**ಕಲ್ಲೇಶಿ:** ದೆವ್ವ ಭೂತಗಳು ಯಾಕೆ ಒಂಟಿಯಾಗಿ ತಿರುಗುತ್ತವೆ.
**ಮಲ್ಲೇಶಿ:** ಸಿಂಗಲ್ ಲೈಫ್ ಇಸ್ ಗೋಲ್ಡನ್ ಲೈಫ್ ಅಂತ ಸತ್ತ ಮೇಲೆ ಗೊತ್ತಾಗಿರುತ್ತದೆ ಅದಕ್ಕೆ.

ವೈದ್ಯರು ರೋಗಿಗೆ ಔಷಧದ ಚೀಟಿ ಬರೆದು ಕೊಟ್ಟು ಹೀಗೆ ಹೇಳಿದರು.
**ವೈದ್ಯ:** ಇದು ದುಬಾರಿ ಬೆಲೆಯ ಔಷಧಿ. ಇದನ್ನು ತೆಗೆದುಕೊಳ್ಳಿ, ಆರೋಗ್ಯ ಚೆನ್ನಾಗಿರುತ್ತದೆ.
**ರೋಗಿ:** ಸರ್ ನಾನು ತುಂಬಾ ಬಡವ. ನನ್ನ ಹತ್ರ ಅಷ್ಟೊಂದು ದುಡ್ಡಿಲ್ಲ.
**ವೈದ್ಯ:** ದುಡ್ಡಿನ ಬದಲು ಏನು ಕೊಡಲು ಸಾಧ್ಯ?
**ರೋಗಿ:** ನೀವು ನಿಮ್ಮ ಕೆಲಸಕ್ಕೆ ಹಣ ತಗೋಬೇಡಿ. ಉಚಿತವಾಗಿ ಚಿಕಿತ್ಸೆ ಕೊಡಿ. ನಾನು ನನ್ನ ಕೆಲಸದಲ್ಲಿ ನಿಮ್ಮ ಹತ್ರ ಹಣ ತಗೊಳ್ಳಲ್ಲ ಉಚಿತವಾಗಿ ಕೆಲಸ ಮಾಡಿಕೊಡುತ್ತೇನೆ.
**ವೈದ್ಯ:** ಒಕೆ... ನೀನೇನು ಕೆಲಸ ಮಾಡ್ತೀಯಾ?
**ರೋಗಿ:** ಸತ್ತವರನ್ನು ಹೂಳುವುದಕ್ಕೆ ಗುಣಿ ತೋಡುತ್ತೇನೆ ಸರ್!

**ಪಿಂಕಿ:** ಡಾರ್ಲಿಂಗ್ ಪ್ರೀತಿ ಹುಟ್ಟಿದು ಎಲ್ಲಿಂದ ಗೊತ್ತಾ?
**ಪಂಕಜ್:** ಅಷ್ಟು ಗೊತ್ತಿಲ್ವ, ಚೀನಾದಿಂದ.
**ಪಿಂಕಿ:** ಅದು ಹೇಗೆ, ಅಷ್ಟು ನಿಖರವಾಗಿ ಹೇಳ್ತಿದ್ದೀಯಾ?
**ಪಂಕಜ್:** ಚೀನಾ ವಸ್ತುಗಳಂತೆ ಪ್ರೀತಿಗೂ ಗ್ಯಾರಂಟಿ ವಾರಂಟಿ ಎರಡೂ ಇರುವುದಿಲ್ಲ.

**ಮೇಷ್ಟ್ರು:** ಹಾಸ್ಪಿಟಾಲಿಟಿ ಎಂದರೇನು?
**ಚಿಂಟು:** ಆಸ್ಪತ್ರೆಯಲ್ಲಿ ಕೊಡುವ ಟೀ ಸರ್!

**ಟೀಚರ್:** ಉಪಕಾರ ಎಂದರೇನು?
**ಬಂಟಿ:** ಉಪ್ಪು, ಖಾರ ಕಲೆಸಿ ತಯಾರಿಸಿದ ಒಂದು ಪದಾರ್ಥ ಮಿಸ್!

**ರೂಮ್ ಬಾಯ್:** ಬನ್ನಿ ಸರ್ ನಿಮಗೆ ರೂಮ್ ತೋರಿಸುತ್ತೇನೆ.
**ಗುಂಡ:** ನಾನು ಇಲ್ಲಿ ಉಳಿಯುವುದಾ? ಇಷ್ಟು ಚಿಕ್ಕ ಕೋಣೆಯಲ್ಲಿ?
**ರೂಮ್ ಬಾಯ್:** ರೂಮ್ ಸೆಕೆಂಡ್ ಫ್ಲೋರ್‌ನಲ್ಲಿದೆ, ಇದು ಲಿಫ್ಟ್ ಸರ್!

**ಸುಮಾ:** 'ಹಿಂದೆ ಹಿಂದೆ ತಿರುಗುತ್ತಿದ್ದರೆ ಹಲ್ಲು ಉದುರಿಸುತ್ತೇನೆ ಅಂತ ರಾಧಾ ಹೇಳಿದರು' ಅವಳ ಹಿಂದೆ ಯಾಕೆ ಬರುತ್ತಿದ್ದೀಯಾ?
**ವಿಕ್ಕಿ:** ಮೇಲಿನ ಹಲ್ಲೋ, ಕೆಳಗಿನ ಹಲ್ಲೋ ಅಂತ ಕ್ಲಿಯರ್ ಆಗಿ ಹೇಳಿಲ್ಲ. ಅದನ್ನು ತಿಳಿದುಕೊಳ್ಳೋಣ ಅಂತ ಹಿಂಬಾಲಿಸುತ್ತಿದ್ದೇನೆ.

**ಗುಂಡ:** ತುಂಬ ದಿನದಿಂದ ಕೆಮ್ಮುತ್ತಿದ್ದ ನಿನ್ನ ಹೆಂಡತಿಗೆ, ಕೆಮ್ಮು ಇದ್ದಕ್ಕಿದ್ದಂತೆ ವಾಸಿಯಾಯ್ತಲ್ಲ. ಎಲ್ಲಿ, ಯಾವ ಔಷಧಿ ಕೊಡಿಸಿದೆ?
**ತಿಮ್ಮ:** ಯಾವ ಔಷಧಿಯನ್ನು ಕೊಡಿಸಲಿಲ್ಲ. ವಯಸ್ಸಾದಂತೆ ಇದೆಲ್ಲಾ ಸಾಮಾನ್ಯ ಎಂದೆ ಅಷ್ಟೆ.







ಸಂಗ್ರಹ: ಶರದ ಕುಲಕರ್ಣಿ, ಬೀದರ್